**ಚಿತ್ರದುರ್ಗದ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ**
**ಸ್ಪೆಷಲ್ ಕೇಸ್(ಪಿ.ಸಿ) ಸಂಖ್ಯೆ: 06/2016**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ರವೀಂದ್ರ ಬಿ. ಮಲ್ಲಾಪುರ | **ಪಿಡಬ್ಲ್ಯೂ.20** |
| **ತಂದೆಯ ಹೆಸರು** | : | ಬಸಪ್ಪ ಮಲ್ಲಾಪುರ | **ಸಿಡಬ್ಲ್ಯೂ.39** |
| **ವಯಸ್ಸು** | : | **55 ವರ್ಷ** | **ಪ್ರಮಾಣ ವಚನ ಬೋಧಿಸಿದ** |
| **ಉದ್ಯೋಗ** | : | ಡೆಪ್ಯೂಟಿ ಕಮೀಷನರ್ , ಸಿಟಿ ಕಾರ್ಪೊರೇಷನ್ ದಾವಣಗೆರೆ | **ದಿನಾಂಕ: 07.02.2019.** |
| **ವಾಸಸ್ಥಳ** | : | ದಾವಣಗೆರೆ . | |

## ಎಸ್‌ಪಿಪಿ ರವರಿಂದ: ಮುಖ್ಯ ವಿಚಾರಣೆ:

ದಿ: 15.07.2013 ರಿಂದ 18.07.2014 ರವರೆಗೆ ನಾನು ಚಿತ್ರದುರ್ಗದ ನಗರಸಭೆಯಲ್ಲಿ ಪೌರಾಯುಕ್ತರು ಅಂತ ಕರ್ತವ್ಯ ನಿರ್ವಹಿಸಿರುತ್ತೇನೆ . ದಿ: 06.06.2014 ರಂದು ಚಿತ್ರದುರ್ಗ ಲೋಕಾಯುಕ್ತ ಪೊಲೀಸರು ಮೊ ನಂ 5/2014 ರಲ್ಲಿ ಆರೋಪಿ ಹೆಂಡತಿ ರಾಜೇಶ್ವರಿ ಇವರ ಹೆಸರಿನಲ್ಲಿರುವ ಚಿತ್ರದುರ್ಗ ಪಟ್ಟಣದ ಜಂಗಮನಕಟ್ಟೆ ಮನೆಗೆ ಟ್ಯಾಕ್ಸ್ ಎಷ್ಟು ಕಟ್ಟಿದ್ದಾರೆ ಅಂತ ವಿವರ ಕೇಳಿದ್ದರು . ಆ ಪತ್ರವನ್ನು ನಿಪಿ–40 ಅಂತ ಗುರುತಿಸಲಾಯಿತು . ಆ ಪ್ರಕಾರ ನಮ್ಮ ಕಛೇರಿಯಲ್ಲಿರುವ ದಾಖಲೆಯನ್ನು ಪರಿಶೀಲಿಸಿ ಅಸೆಸ್ ಮೆಂಟ್ ನಂ 18673/1 ಇದಕ್ಕೆ ಸಂಬಂಧಿಸಿದ ಹಾಗೆ ಆರೋಪಿ ಹೆಂಡತಿ ಎಷ್ಟು ಕಟ್ಟಡ ಕಟ್ಟಲು ಶುಲ್ಕ ಕೊಟ್ಟಿದ್ದಾರೆ , ನೀರು ಪಡೆಯಲಿಕ್ಕೆ ಎಷ್ಟು ಹಣ ಪಾವತಿ ಮಾಡಿದ್ದಾರೆ , ಮನೆ ಕಟ್ಟಡಲು ಫೀ ಎಷ್ಟು ಕಟ್ಟಿದ್ದಾರೆ ಅಂತ ವಿವರ ಸಲ್ಲಿಸಿದ್ದೇನೆ . ಅದನ್ನು ನಿಪಿ–41 ಅಂತ ಗುರುತಿಸಲಾಯಿತು . ಅಂದರೆ ಆರೋಪಿ ಹೆಂಡತಿ ನಮ್ಮ ಕಛೇರಿಗೆ 2011 ರಿಂದ 2014 ರವರೆಗೆ ರೂ.181/–, ರೂ.2449/–, ಠೇವಣಿ ರೂ.6400/– ಪಾವತಿ ಮಾಡಿರುತ್ತಾರೆ .

**<u>ಆರೋಪಿತರ ಪರ ಶ್ರೀ ಎಸ್.ಪಿ.ಹೆಚ್. ವಕೀಲರಿಂದಃ ಪಾಟೀ ಸವಾಲುಃ</u>**

2. ಸದರಿ ಅಸೆಸ್ ಮೆಂಟ್ ನಂ 18673/1 ನೇದಕ್ಕೆ ಸ್ವತಃ ಯಾರು ಕಛೇರಿಗೆ ಬಂದು ಹಣ ಕಟ್ಟಿದರು ಅಂತ ಹೇಳಲು ಬರುವುದಿಲ್ಲ .

ಮರು ವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಎಸ್.ಬಿ. ವಸ್ತ್ರಮಠ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.